KAMD720009312025

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ನ್ಯಾಯಿಕ ದಂಡಾಧಿಕಾರಿ
ರವರ ನ್ಯಾಯಾಲಯ , ಶ್ರೀರಂಗಪಟ್ಟಣ.

**ಸಿ.ಸಿ.ಃ 557/2025**

| **ಪಿರ್ಯಾದು** | **ಆರೋಪಿತ** |
|---|---|
| ಅರಕೆರೆ ಪೊಲೀಸ್ ಠಾಣೆ | 1) ಪ್ರಕಾಶ್ ಬಿನ್ ಮರಿಶೆಟ್ಟಿ, 42 ವರ್ಷ, ಎಲಚಾಕನಹಳ್ಳಿ ಗ್ರಾಮ, ಕೊತ್ತತ್ತಿ ಹೋಬಳಿ, ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ |

**ಃ ಆರೋಪಣೆ ಃ**

ಶ್ರೀ ಉಮೇಶ ಎಂ.ಪಿ. ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ, ಶ್ರೀರಂಗಪಟ್ಟಣ ಆದ ನಾನು ಆರೋಪಿತರಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗೆ ಗುರಿಪಡಿಸುವುದೇನೆಂದರೆಃ

ದಿನಾಂಕಃ 23.04.2025 ರಂದು ಬೆಳಿಗ್ಗೆ 09.00 ಗಂಟೆ ಸಮಯದಲ್ಲಿ ಅರಕೆರೆ ಪೊಲೀಸ್ ಠಾಣಾ ಸರಹದ್ದಿನ ತಡಗವಾಡಿ ಗ್ರಾಮದ ಅರಕೆರೆ-ಮಂಡ್ಯ ರಸ್ತೆಯಲ್ಲಿ ಆರೋಪಿ ರವರು ಕೆಎ-11-ಎಫ್-2015 ರ ಕೆ.ಎಸ್.ಆರ್.ಟಿ.ಸಿ ಬಸ್ ಚಾಲಕನಾಗಿದ್ದು ಮಂಡ್ಯ ಕಡೆಗೆ ಬಸ್ ಅನ್ನು ಅತೀ ವೇಗ ಅಜಾಗರೂಕತೆಯಿಂದ ಚಾಲನೆ ಮಾಡಿದ್ದು ಭಾರತೀಯ ನ್ಯಾಯ ಸಂಹಿತೆ 281 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

2. ಅದೇ ದಿನಾಂಕ , ಅದೇ ಸ್ಥಳದಲ್ಲಿ ಆರೋಪಿ ಆದ ಬಸ್ ಅನ್ನು ಯಾವುದೇ ಸೂಚನೆ ನೀಡದೇ ಸಡನ್ ಬ್ರೇಕ್ ಹಾಕಿದ್ದರಿಂದ ಸಾಕ್ಷಿ-2 ರವರು ತನ್ನ ಸ್ಕೂಟರ್ ಅನ್ನು ಬಸ್

KAMD720009312025

ಹಿಂಭಾಗಕ್ಕೆ ಡಿಕ್ಕಿ ಮಾಡಿಕೊಂಡ ಪರಿಣಾಮ ಸಾಕ್ಷಿ-1 ರವರ ಎದೆಯ ಬಳಿ, ಎಡ ಮತ್ತು ಬಲಕಾಲಿಗೆ ಹಾಗೂ ಸಾಕ್ಷಿ-2 ರವರಿಗೆ ಬಲಭುಜ, ಎಡಕಣ್ಣಿನ ಹುಬ್ಬಿನ ಬಳಿ, ಎಡ ಕಣ್ಣಿಗೆ ಸಾಮಾನ್ಯ ಹಾಗೂ ತೀವ್ರ ಸ್ವರೂಪದ ಗಾಯಗಳಾಗಿರುವ ಪರಿಣಾಮ ಭಾರತೀಯ ನ್ಯಾಯ ಸಂಹಿತೆ 125(ಎ) ಹಾಗೂ 125(ಬಿ) ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ದಿನಾಂಕ ಃ 23 ನೇ ಏಪ್ರೀಲ್ 2026

(ಮೇಲ್ಕಂಡ ಆಪಾದನೆಯನ್ನು ಆರೋಪಿತರಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನು ನೀಡಿದ ಉತ್ತರವನ್ನು ಯಥವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು ಎಂದು ಈ ಮೂಲಕ ದೃಢೀಕರಿಸಲಾಗಿದೆ)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಶ್ರೀರಂಗಪಟ್ಟಣ

ಆರೋಪಿತನ ಸಹಿಃ